KACN010007822026

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ

ದಿನಾಂಕ 23ನೇ ಮಾಹೆ ಜೂನ್ 2026

ಉಪಸ್ಥಿತರುಃ ಶ್ರೀಮತಿ ಪ್ರಭಾವತಿ ಜಿ.
ಎಲ್ ಎಲ್ ಎಂ.
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ

ಕ್ರಿಮಿನಲ್ ಮಿಸ್ ನಂ. **242/2026**

ಅರ್ಜಿದಾರರುಃ 1. ಪಳನಿಸ್ವಾಮಿ ಬಿನ್ ರಾಮವನನ್,
47 ವರ್ಷ, ಎ.ಡಿ.ಕಾಲೋನಿ,
ಮಾರನೂರು, ಸೆನ್ನಾಕ್ಕಪೂದೂರ್,
ಬೂಸರಿಪಾಳ್ಯಂ ಪೋಸ್ಟ್
ಈರೋಡ್ ಜಿಲ್ಲೆ,
ತಮಿಳುನಾಡು ರಾಜ್ಯ.

2. ಷಣ್ಮುಗಂ ಬಿನ್ ಲೇಟ್ ಚೆನ್ನರಂಗನ್,
ವಯಸ್ಸು 40 ವರ್ಷ,
ಮನೆ ನಂ.1/115, ರಾಜೀವನಗರ,
ಪೊಲಾವಪಾಳ್ಯಂ ಪೋಸ್ಟ್
ನಂಬಿಯೂರು ತಾಲ್ಲೂಕು,
ಈರೋಡ್ ಜಿಲ್ಲೆ,
ತಮಿಳುನಾಡು ರಾಜ್ಯ.

(ಪರವಾಗಿ **ಶ್ರೀ.ಹೆಚ್.ವಿ.ಲಕ್ಷ್ಮೀಕಾಂತ ರಾಜು**, ವಕೀಲರು)

ವಿರುದ್ಧ

**ಎದುರುದಾರರುಃ** **ಸರ್ಕಾರದ ಪರವಾಗಿ, ಗ್ರಾಮಾಂತರ ಪೋಲೀಸ್ ಠಾಣೆ .**
**ಚಾಮರಾಜನಗರ.**
**(ಪರವಾಗಿ ಸರ್ಕಾರಿ ಅಭಿಯೋಜಕರು)**

## ಆದೇಶ

ಅರ್ಜಿದಾರರು ಸನ್ನಿಧಿ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 ಕಲಂ 482 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಅರ್ಜಿದಾರರ ವಿರುದ್ಧ ಎದುರುದಾರರು ಕರ್ನಾಟಕ ಜಾನುವಾರು ಹತ್ಯೆ ಮತ್ತು ಪ್ರತಿಭಂಧಕ ಮತ್ತು ಸಂರಕ್ಷಣಾ ಆಧ್ಯಾದೇಶ 2020 ಕಲಂ 4,5,7,12 ರ ಅಡಿಯಲ್ಲಿ ಗುನ್ನಾ ಸಂಖ್ಯೆ **100/2026** ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

**2. ಕೇಸಿನ ವಿದ್ಯಮಾನಗಳ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

ದಿನಾಂಕಃ21-05-2025 ರಂದು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಚಾಮರಾಜನಗರ ತಾಲ್ಲೂಕು ಯಡಪುರ ಗ್ರಾಮದ ಬಳಿ ಇರುವ ಅಂಕನಾಥೇಶ್ವರ ಹೈಟೆಕ್ ನರ್ಸರಿ ಎದುರುಗಡೆ ಇರುವ ಉತ್ತುವಳ್ಳಿ ಗ್ರಾಮದ ಮಹದೇವಪ್ಪ ರವರ ಜಮೀನಿನ ಮುಂದೆ ಇರುವ ಮುಖ್ಯ ರಸ್ತೆಯಲ್ಲಿ ಪ್ರಕರಣದ ಅರೋಪಿ 1 ಮತ್ತು 2 ರವರು ಟಿ.ಎನ್ -36 ಎಕೆ 6301 ರ ಬುಲ್ಲೂರೋ ಪಿಕಪ್ ಗೂಡ್ಸ್ ವಾಹನದಲ್ಲಿ ಜಾನುವಾರುಗಳನ್ನು ಕಸಾಯಿ ಖಾನೆಗೆ ಸಾಗಾಣಿಕೆ ಮಾಡುವ ಉದ್ದೇಶದಿಂದ ವಾಹನದ ಹಿಂಭಾಗ ಜಾನುವಾರುಗಳಿಗೆ ನೀರು ಅಹಾರ ನೀಡದೇ ನಿಲ್ಲಲು ಸ್ಥಳ ಇಲ್ಲದೇ ಕುತ್ತಿಗೆಗೆ ಉಸಿರಾಡಲು ತೊಂದರೆಯಾಗುವ ರೀತಿಯಲ್ಲಿ ಹಗ್ಗವನ್ನು ಕಟ್ಟಿ ವಾಹನದಲ್ಲಿ ಒಟ್ಟಿಗೆ ತುಂಬಿಕೊಂಡು ಅದರ ಜೊತೆಗೆ ಅರೋಪಿ 2 ರವರು ಯಾವುದೇ ರಹದಾರಿ ಇಲ್ಲದೆ ಅಕ್ರಮವಾಗಿ ಅರೋಗ್ಯವಂತ ಹಾಗೂ ಧೃಢಕಾಯ ಒಟ್ಟು 11 ಜಾನುವಾರುಗಳನ್ನು ತಮ್ಮ ವಾಹನದಲ್ಲಿ ತುಂಬಿಕೊಂಡು ಕಸಾಯಿ ಖಾನೆಗಳಿಗೆ ಸಾಗಾಣಿಕೆ ಮಾಡುತ್ತಿದ್ದು, ಆರೋಪಿತರ ವಿರುದ್ಧ ಚಾಮರಾಜನಗರ, ಗ್ರಾಮಾಂತರ ಕಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು ಇರುತ್ತದೆ.

**3.** ಈ ಪ್ರಕರಣದಲ್ಲಿ ಅರ್ಜಿದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಎದುರುದಾರ ಪೋಲಿಸರು ಅರೋಪಿಸಿರುವಂತೆ ಅರ್ಜಿದಾರರು ಯಾವುದೇ ರೀತಿಯ ಅಪರಾಧವನ್ನು ಮಾಡಿರುವುದಿಲ್ಲ. ಈ ಪ್ರಕರಣಕೂ ಅರ್ಜಿದಾರರಿಗೂ ಯಾವುದೇ ಸಂಬಂದವಿರುವುದಿಲ್ಲ. ಸದರಿ

ಅಪರಾಧಗಳು ಮರಣದಂಡನೆ ಅಥವಾ ಜೀವವಾಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಾಗಿರುವುದಿಲ್ಲ. ಈ ಕಾರಣದಿಂದ ಅರ್ಜಿದಾರರಿಗೆ ಷರತ್ತುಬದ್ಧ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಿಕೊಡಬೇಕೆಂದು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಅರ್ಜಿದಾರರು ಜಾಮೀನು ಪಡೆದ ನಂತರ ಅಭಿಯೋಜನಾ ಸಾಕ್ಷಿದಾರರನ್ನು ಎದರಿಸುವ ಅಥವಾ ಬೆದರಿಕೆ ಹಾಕುವ ಯಾವುದೇ ಕೆಲಸ ಮಾಡುವುದಿಲ್ಲ ಎಂಬ ಭರವಸೆಯನ್ನ ನೀಡುತ್ತಾರೆ.. ಅರ್ಜಿದಾರರು ಈ ಘನ ನ್ಯಾಯಾಲಯವು ವಿಧಿಸುವ ಯಾವುದೇ ಷರತ್ತುಗಳಿಗೆ ಬದ್ಧರಾಗಿರುವುದಾಗಿಯೂ ಮತ್ತು ಈ ಘನ ನ್ಯಾಯಾಲಯವು ಸೂಚಿಸುವ ಜಾಮೀನುದಾರರನ್ನು ನೀಡಲು ಬದ್ಧರಾಗಿರುತ್ತಾರೆ. ಈ ಪ್ರಕರಣದಲ್ಲಿ ಅರ್ಜಿದಾರರುಗಳು ತನಿಖಾಧಿಕಾರಿಗಳ ಮುಂದೆ ಮತ್ತು ವಿಚಾರಣೆ ನ್ಯಾಯಾಲಯದಲ್ಲಿ ತಪ್ಪದೇ ಹಾಜರಾಗುವುದಾಗಿ ಈ ಘನ ನ್ಯಾಯಾಲಯದಲ್ಲಿ ಭರವಸೆಯನ್ನು ನೀಡುತ್ತಾರೆ. ಆದುದರಿಂದ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

4. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರು ಆರೋಪಿತರ ಜಾಮೀನು ಅರ್ಜಿಗೆ ತಮ್ಮ ವಿವರವಾದ ತಕರಾರುಗಳನ್ನು ಸಲ್ಲಿಸಿದ್ದು ಈ ಕೇಸಿನ ವಿಧ್ಯಮಾನಗಳನ್ನು ಹೇಳಿ, ಸದರಿ ಪ್ರಕರಣದಲ್ಲಿ ಅರ್ಜಿದಾರ/ಆರೋಪಿತರು ಕೃತ್ಯ ನಡೆದಾಗಿನಿಂದಲೂ ತಲೆ ಮರೆಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಇವರುಗಳನ್ನು ದಸ್ತಗಿರಿ ಮಾಡಿ ತನಿಖೆಗೆ ಒಳಪಡಿಸಬೇಕಾಗಿರುತ್ತದೆ. ಇವರುಗಳು ಮಾನ್ಯ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಆದುದರಿಂದ ಸದರಿ ಅರ್ಜಿದಾರ/ಆರೋಪಿತರ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗತಕ್ಕದ್ದಲ್ಲ. ಅರ್ಜಿದಾರ /ಅರೂಪಿತರ ವಿರುದ್ಧ ಅಪಾದನೆಗಳು ಜಾಮೀನು ರಹಿತವಾಗಿದ್ದು 3 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷದವರೆಗಿನ ಸಜೆ ಮತ್ತು 50 ಸಾವಿರ ರೂಗಳಿಗೆ ಕಡಿಮೆ ಇಲ್ಲದಂತೆ 5 ಲಕ್ಷ ರೂವರೆಗಿನ ದಂಡವನ್ನು ವಿಧಿಸಬಹುದಾಗಿರುತ್ತದೆ. ಅರ್ಜಿದಾರ/ಆರೋಪಿತರ ವಿರುದ್ಧ ಆಪಾಧನೆಗಳು ಗಂಭೀರ ಸ್ವರೂಪದ್ದಾಗಿದ್ದು, ಜಾಮೀನು ರಹಿತವಾಗಿದ್ದು, ಜೀವಾವಧಿ ಶಿಕ್ಷೆ ಅಥವಾ ದಂಡವನ್ನು ವಿಧಿಸಬಹುದಾಗಿರುತ್ತದೆ. ಈ ಹಂತದಲ್ಲಿ ಅರ್ಜಿದಾರ/ಆರೋಪಿತರನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಲ್ಲಿ ಸಾಕ್ಷ್ಯಾಧಾರಗಳನ್ನು ನಾಶ ಮಾಡುವ, ಪ್ರಕರಣದ ತನಿಖೆಗೆ ತಡೆಯುಂಟು ಮಾಡುವ ಹಾಗೂ ತಲೆ ಮರೆಸಿಕೊಂಡು ಪರಾರಿಯಾಗುವ ಎಲ್ಲಾ ಸಾಧ್ಯತೆಗಳಿರುತ್ತವೆ . ಅರ್ಜಿದಾರ/ಆರೋಪಿತರು ನಿರಪರಾಧಿ ಎನ್ನುವುದು ನಿಜವಿರುವುದಿಲ್ಲ. ಆದುದರಿಂದ ಆರೋಪಿತರ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗತಕ್ಕದ್ದಲ್ಲ. ಆದ್ದರಿಂದ ಸದರಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

5. ಉಭಯೇತರ ವಾದಗಳನ್ನು ಆಲಿಸಲಾಯಿತು.

6. ಪ್ರಕರಣದ ತೀರ್ಮಾನಕ್ಕಾಗಿ ಈ ಕೆಳಕಂಡ ವಿಷಯಗಳನ್ನು ಗಣನೆಗೆ ತಗೆದುಕೊಳ್ಳಲಾಯಿತು.

1. ಆರೋಪಿತರು/ ಅರ್ಜಿದಾರರು ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರು ಎಂಬುದನ್ನು ಸಕಾರಣಗಳ ಮೂಲಕ ಸಾಭೀತುಪಡಿಸುವರೇ ?

2, ಏನು ಆದೇಶ ?

7. ಮೇಲ್ಕಂಡ ಪ್ರಶ್ನೆಗಳಿಗೆ ಈ ಕೆಳಂಡಂತೆ ಉತ್ತರಃ

ಅಂಶ ಸಂಖ್ಯೆ 1: ನಕಾರಾತ್ಮಕವಾಗಿ

ಅಂಶ ಸಂಖ್ಯೆ 2: ಈ ಕೆಳಕಂಡ ಅಂತಿಮ ಆದೇಶದಂತೆಃ

## ಕಾರಣಗಳು

**8. ಅಂಶ ಸಂಖ್ಯೆ 1: ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಅರ್ಜಿದಾರರ ವಿರುದ್ಧ ಎದುರುದಾರರು ಕರ್ನಾಟಕ ಜಾನುವಾರು ಹತ್ಯೆ ಮತ್ತು ಪ್ರತಿಭಂಧಕ ಮತ್ತು ಸಂರಕ್ಷಣಾ ಆಧ್ಯಾದೇಶ 2020 ಕಲಂ 4,5,7,12 ರ ಅಡಿಯಲ್ಲಿ ಗುನ್ನಾ ಸಂಖ್ಯೆ **100/2026** ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. .

**9.** ಫ್ರಾಸಿಕ್ಯೂಷನ್ ಪ್ರಕಾರ, ದಿನಾಂಕಃ21-05-2025 ರಂದು ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಚಾಮರಾಜನಗರ ತಾಲ್ಲೂಕು ಯಡಪುರ ಗ್ರಾಮದ ಬಳಿ ಇರುವ ಅಂಕನಾಥೇಶ್ವರ ಹೈಟೆಕ್ ನರ್ಸರಿ ಎದುರುಗಡೆ ಇರುವ ಉತ್ತುವಳ್ಳಿ ಗ್ರಾಮದ ಮಹದೇವಪ್ಪ ರವರ ಜಮೀನಿನ ಮುಂದೆ ಇರುವ ಮುಖ್ಯ ರಸ್ತೆಯಲ್ಲಿ ಪ್ರಕರಣದ ಅರೋಪಿ 1 ಮತ್ತು 2 ರವರು ಟಿ.ಎನ್ -36 ಎಕೆ 6301 ರ ಬುಲ್ಯೂರೋ ಪಿಕಪ್ ಗೂಡ್ಸ್ ವಾಹನದಲ್ಲಿ ಜಾನುವಾರುಗಳನ್ನು ಕಸಾಯಿ ಖಾನೆಗೆ ಸಾಗಾಣಿಕೆ ಮಾಡುವ ಉದ್ದೇಶದಿಂದ ವಾಹನದ ಹಿಂಭಾಗ ಜಾನುವಾರುಗಳಿಗೆ ನೀರು ಅಹಾರ ನೀಡದೇ ನಿಲ್ಲಲು ಸ್ಥಳ ಇಲ್ಲದೇ ಕುತ್ತಿಗೆಗೆ ಉಸಿರಾಡಲು ತೊಂದರೆಯಾಗುವ ರೀತಿಯಲ್ಲಿ ಹಗ್ಗವನ್ನು ಕಟ್ಟಿ ವಾಹನದಲ್ಲಿ ಒಟ್ಟಿಗೆ ತುಂಬಿಕೊಂಡು ಅದರ ಜೊತೆಗೆ ಅರೂಪಿ 2 ರವರು ಯಾವುದೇ ರಹದಾರಿ ಇಲ್ಲದೆ ಅಕ್ರಮವಾಗಿ ಅರೋಗ್ಯವಂತ ಹಾಗೂ ಧೃಢಕಾಯ ಒಟ್ಟು 11 ಜಾನುವಾರುಗಳನ್ನು ತಮ್ಮ ವಾಹನದಲ್ಲಿ ತುಂಬಿಕೂಂಡು ಕಸಾಯಿ ಖಾನೆಗಳಿಗೆ ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ. ಮಹಜರ್ ಮತ್ತು ದೂರಿನ ಆಧಾರದ ಮೇಲೆ, ಆರೋಪಿ ನಂ.1 ಮತ್ತು **2** ರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಅರ್ಜಿದಾರರ ಪರ ವಕೀಲರು ವಾದಿಸುತ್ತಾ, ಈ ಪ್ರಕರಣಕೂ ಅರ್ಜಿದಾರರಿಗೂ ಯಾವುದೇ ಸಂಬಂದವಿರುವುದಿಲ್ಲ. ಸದರಿ ಅಪರಾಧಗಳು ಮರಣದಂಡನೆ ಅಥವಾ ಜೀವವಾಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಾಗಿರುವುದಿಲ್ಲ. ಈ ಕಾರಣದಿಂದ ಅರ್ಜಿದಾರರಿಗೆ ಷರತ್ತುಬದ್ಧ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಿಕೊಡಬೇಕೆಂದು ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಂಡಿರುತ್ತಾರೆ. ಆರೋಪಿಗಳು ಖಾಯಂ ನಿವಾಸಿಗಳಾಗಿದ್ದು, ಸಾಕ್ಷಿಗಳನ್ನು ತಿರುಚುವ ಅಥವಾ ತಲೆಮರೆಸಿಕೊಳ್ಳುವ ಸಾಧ್ಯತೆಯಿಲ್ಲ. ತನಿಖೆ ಬಹುತೇಕ ಪೂರ್ಣಗೊಂಡಿದೆ; ಕಸ್ಟಡಿ ವಿಚಾರಣೆ ಅಗತ್ಯವಿಲ್ಲ ಎಂದು ತಿಳಿಸಿರುತ್ತಾರೆ.

ಸರ್ಕಾರದ ಪರ ವಕೀಲರು ತಮ್ಮ ವಾದದಲ್ಲಿ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸಿ ದನಗಳನ್ನು ಅಕ್ರಮವಾಗಿ ಸಾಗಿಸುವುದನ್ನು ಅಪರಾಧ ಒಳಗೊಂಡಿದೆ, ಹಾಗಾಗಿ ಜಾಮೀನು ನಿರಾಕರಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಮೇಲ್ಕಂಡ ವಾದ ವಿವಾದಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ವಧೆ ತಡೆ ಮತ್ತು ದನ ಸಂರಕ್ಷಣಾ ಕಾಯ್ದೆ, 2020 ರ ಸೆಕ್ಷನ್ 4, 5, 7, 12 ರ ಅಡಿಯಲ್ಲಿ ಆರೋಪಿಸಲಾದ ಅಪರಾಧಗಳಿಗೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಲಾಗದಿದ್ದರೂ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) , ಮಹಜರ್ ಮತ್ತು ಸ್ಥಳ ಪರಿಶೀಲನೆ ವರದಿಗಳು ಸೇರಿದಂತೆ ಪ್ರಮುಖ ದಾಖಲೆಗಳು ಆರೋಪಿಗಳ ಸಕ್ರಿಯ ಒಳಗೊಳ್ಳುವಿಕೆಯನ್ನು ಸ್ಪಷ್ಟವಾಗಿ ತೋರಿಸುತ್ತಿವೆ. ತನಿಖಾಧಿಕಾರಿಗಳು ಆರೋಪಿಯ ಸ್ವಾಧೀನದಿಂದ ನೇರವಾಗಿ ಜೀವಂತ ದನಗಳನ್ನು ವಶಪಡಿಸಿಕೊಂಡಿದೆ. ಸೆಕ್ಷನ್ 4 (ಗೋಹತ್ಯೆ ನಿಷೇಧ) ಅಡಿಯಲ್ಲಿನ ಅಪರಾಧವು 3 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು 7 ವರ್ಷಗಳವರೆಗೆ ವಿಸ್ತರಿಸುವ ಕಠಿಣ ಜೈಲು ಶಿಕ್ಷೆಯನ್ನು ಹೊಂದಿದೆ , ಜೊತೆಗೆ ₹50,000 ರಿಂದ ₹5,00,000 ವರೆಗಿನ ಬೃಹತ್ ಆರ್ಥಿಕ ದಂಡವನ್ನು ವಿಧಿಸಬಹುದು. ಈ ಹಂತದಲ್ಲಿ ಅರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ ಆರೋಪಿಯು ಆರ್ಥಿಕ ನಷ್ಟವನ್ನು ಮರುಪಡೆಯಲು ಅದೇ ಅಕ್ರಮ ವ್ಯವಹಾರದಲ್ಲಿ ಮತ್ತೆ ತೊಡಗಿಸಿಕೊಳ್ಳುವ ಸಾಧ್ಯತೆ ಬಹಳ ಹೆಚ್ಚಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಗೋಹತ್ಯೆಯ ಅಪರಾಧವು ಹೆಚ್ಚು ಅಸ್ಥಿರ ಮತ್ತು ಭಾವನಾತ್ಮಕವಾಗಿದೆ. ಈ ಕಾನೂನನ್ನು ಸ್ಪಷ್ಟವಾಗಿ ಉಲ್ಲಂಘಿಸಿದ ವ್ಯಕ್ತಿಗೆ ಜಾಮೀನು ನೀಡುವುದರಿಂದ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆಗೆ ಅಪಾಯವಾಗುತ್ತದೆ. ಮೇಲೆ ತಿಳಿಸಲಾದ ಸಂಗತಿಗಳು ಮತ್ತು ಕಾನೂನು ಆಧಾರಗಳನ್ನು ಗಮನದಲ್ಲಿಟ್ಟುಕೊಂಡು, ನ್ಯಾಯದ ಹಿತದೃಷ್ಟಿಯಿಂದ ಮತ್ತು ಅಡೆತಡೆಯಿಲ್ಲದ, ನ್ಯಾಯಯುತ ವಿಚಾರಣೆಯನ್ನು ಖಚಿತಪಡಿಸಿಕೊಳ್ಳಲು ಈ ನ್ಯಾಯಾಲಯವು

ಆರೋಪಿ/ಅರ್ಜಿದಾರರ ಜಾಮೀನು ಅರ್ಜಿಯನ್ನು ತಿರಸ್ಕರಿಸಿ ಆದೇಶಿಸುತ್ತದೆ. ಆದುದರಿಂದ ಅಂಶ–1 ಅನ್ನು ನಕಾರಾತ್ಮಕವಾಗಿ ಉತ್ತರಿಸಿದ್ದು ಇರುತ್ತದೆ.

**10. ಅಂಶ ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಚರ್ಚಿಸಿದ ನಂತರ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿಯಲ್ಲಿ ಅರ್ಜಿದಾರ/ಆರೋಪಿತರು ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ.

( ಗ್ರೇಡ್–1 ಶೀಘ್ರಲಿಗಾರರಿಗೆ ಕಂಪ್ಯೂಟರ್ ಮೂಲಕ ಉಕ್ತಲೇಖನ ನೀಡಿದ್ದು, ಬೆರಳಚ್ಚು ಮಾಡಿದ್ದು, ತಿದ್ದುಪಡಿ ಮಾಡಿ ಪುನಃ ತೆರೆದ ನ್ಯಾಯಾಲಯದಲ್ಲಿ ಘೋಷಣೆಯನ್ನು ದಿನಾಂಕ 23.06.2026 ರಂದು ಮಾಡಿರುತ್ತೇನೆ)

**( ಪ್ರಭಾವತಿ .ಜಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**